ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ,ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೋಂದಣಿ & ಫಲಿತಾಂಶ/2015-16. ದಿನಾಂಕ 25-05-2016.

<u>ಸು ತ್ತೋ ಲೆ</u>

ವಿಷಯ: 2016ರ ಮಾರ್ಚ್/ಏಪ್ರಿಲ್ ದ್ವಿತೀಯ ಪಿಯುಸಿ ವಾರ್ಷಿಕ ಫಲಿತಾಂಶ ಪ್ರಕಟಣೆ ಮತ್ತು ಪೂರಕ ಪರೀಕ್ಷೆಯ ಬಗ್ಗೆ.

* * *

**2016ರ ಮಾರ್ಚ್/ಏಪ್ರಿಲ್ ನಲ್ಲಿ ನಡೆಸಲಾದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ: 25-05-2016ರ ಬೆಳಗ್ಗೆ 11-00ಗಂಟೆಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು. ಮತ್ತು ದಿನಾಂಕ 25-05-2016ರಂದು ಸಂಜೆ 04-00ಗಂಟೆಗೆ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಕಟಿಸಲಾಗುವುದು. ಪ್ರಕಟಗೊಂಡಿರುವ ಫಲಿತಾಂಶದಲ್ಲಿ ವ್ಯತ್ಯಾಸವಿದ್ದಲ್ಲಿ ಈ ಬಗ್ಗೆ ಖಚಿತ ಪಡಿಸಿಕೊಳ್ಳಲು ಈ ಕೆಳಕಂಡ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.**

**<u>I ಉತ್ತರ ಪತ್ರಿಕೆಯ ಸ್ಕ್ಯಾನಿಂಗ್ ಪ್ರತಿ</u> :**

1. ಉತ್ತರ ಪತ್ರಿಕೆಯ **ಸ್ಕ್ಯಾನಿಂಗ್** ಪ್ರತಿಗಾಗಿ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ **30-05-2016**
2. **ಸ್ಕ್ಯಾನಿಂಗ್** ಪ್ರತಿ ಪಡೆಯಲು ಶುಲ್ಕ ಪ್ರತಿ ವಿಷಯಕ್ಕೆ ₹.400-00

**<u>II ಉತ್ತರ ಪತ್ರಿಕೆಯ ಮರುಮೌಲ್ಯಮಾಪನ</u> :**

1. ಮರುಮೌಲ್ಯಮಾಪನಕ್ಕೆ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ **07-06-2016**
2. ಮರುಮೌಲ್ಯಮಾಪನದ ಶುಲ್ಕ – ಪ್ರತಿ ವಿಷಯಕ್ಕೆ **₹.1260-00**
3. ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮುಂದಿನ ವ್ಯಾಸಂಗಕ್ಕೆ ಹಾಗೂ ಅನುತ್ತೀರ್ಣ ಅಭ್ಯರ್ಥಿಗಳು ಮುಂದಿನ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಮರುಮೌಲ್ಯಮಾಪನದ ಫಲಿತಾಂಶಕ್ಕಾಗಿ ಕಾಯಬಾರದು.
4. ಮರುಮೌಲ್ಯಮಾಪನದಲ್ಲಿ ನಿಗಧಿಪಡಿಸಿರುವ ಅಂಕಗಳಿಗಿಂತ ಹೆಚ್ಚಿನ ಅಂಕಗಳು ಅಥವಾ **ಕಡಿಮೆ ಅಂಕಗಳು ಬಂದಲ್ಲಿ** ಅಂಕಗಳೊಂದಿಗೆ ಫಲಿತಾಂಶವನ್ನು ಪರಿಷ್ಕರಿಸಿ ಪ್ರಕಟಿಸಲಾಗುವುದು. 'Karnataka Pre-University course S.L.P.E. Rules-1997, 29 (ಅ) ಅನ್ವಯ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗೆ ಈ ಮೊದಲು ಪಡೆದ ಅಂಕಗಳನ್ನು ಮರು ಸ್ಥಾಪಿಸಲು ಅವಕಾಶವಿರುವುದಿಲ್ಲ .
5. ಮರುಮೌಲ್ಯಮಾಪನದ ಬಗ್ಗೆ ಮರುಮೌಲ್ಯಮಾಪಕರು ತೆಗೆದುಕೊಂಡ ನಿರ್ಧಾರವೇ ಅಂತಿಮ. ಇದರ ಮೇಲೆ ಮರು ಪರಿಶೀಲನೆ ಅಥವಾ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ.
6. ಮರು ಮೌಲ್ಯಮಾಪನದ ಫಲಿತಾಂಶವನ್ನು ಇಲಾಖೆಯ ಅಂತರ್ಜಾಲದಲ್ಲಿ ಆಯಾ ದಿನವೇ ಪ್ರಕಟಿಸಲಾಗುವುದು.

**<u>III ಅಂಕಗಳ ಮರುಎಣಿಕೆ</u> :**

1. ಅಂಕಗಳ ಮರುಎಣಿಕೆಗೆ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ 7-6-2016
2. ಅಂಕಗಳ ಮರುಎಣಿಕೆಗೆ ಶುಲ್ಕ ಇರುವುದಿಲ್ಲ.
3. ಮರುಎಣಿಕೆ ಫಲಿತಾಂಶವನ್ನು ಅಂತರ್ಜಾಲದಲ್ಲಿ ಆಯಾ ದಿನವೇ-ಪ್ರಕಟಿಸಲಾಗುವುದು.

**IV ಜುಲೈ 2016ರಲ್ಲಿ ನಡೆಸಲಾಗುವ ಪೂರಕ ಪರೀಕ್ಷೆಗೆ ಅನುತ್ತೀರ್ಣ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ ಮತ್ತು ಫಲಿತಾಂಶ ತಿರಸ್ಕರಣಾ ಶುಲ್ಕಗಳ ವಿವರ:**

| **ಪರೀಕ್ಷಾ ಶುಲ್ಕ ರೂ.** | |
|---|---|
| ಒಂದು ವಿಷಯಕ್ಕೆ | **₹.101-00** |
| ಎರಡು ವಿಷಯಕ್ಕೆ | **₹.201-00** |
| ಮೂರು ಅಥವಾ ಹೆಚ್ಚಿನ ವಿಷಯಗಳು | **₹.302-00** |
| ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಂದ ಕಡ್ಡಾಯವಾಗಿ ಸಲ್ಲಿಸಬೇಕಾದ ಅಂಕಪಟ್ಟಿ ಶುಲ್ಕ | **₹.36-00** |

| ಫಲಿತಾಂಶ ತಿರಸ್ಕರಣಾ ಶುಲ್ಕ ರೂ. | |
|---|---|
| ಪ್ರಥಮ ಬಾರಿಗೆ ಒಂದು ವಿಷಯಕ್ಕೆ | ₹.126-00 |
| ದ್ವಿತೀಯ ಹಾಗೂ ಅಂತಿಮ ಬಾರಿಗೆ ಒಂದು ವಿಷಯಕ್ಕೆ | ₹.252-00 |

**2016ರ ಜುಲೈನಲ್ಲಿ ನಡೆಸುವ ದ್ವಿತೀಯ ಪಿಯುಸಿ ಸಪ್ಲಿಮೆಂಟರಿ ಪರೀಕ್ಷೆಗೆ ಅನುತ್ತೀರ್ಣ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕಗಳು:**

| ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಕಡೇ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಒಂದೇ ಕಂತಿನಲ್ಲಿ ಖಜಾನೆಗೆ ಸಂದಾಯ ಮಾಡಬೇಕಾದ ದಿನಾಂಕ | ಕಾಲೇಜಿನವರು ಪರೀಕ್ಷಾ ಅರ್ಜಿಗಳನ್ನು ಮೂಲ ಚಲನ್ ಸಹಿತ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಿನಾಂಕ |
|---|---|---|
| **06-06-2016** | **07-06-2016** | **08-06-2016.** |

ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಪರೀಕ್ಷಾ ಅರ್ಜಿಗಳನ್ನು, ಕಾಲೇಜುವಾರು ಕ್ರೋಢೀಕೃತ ವಿದ್ಯಾರ್ಥಿಗಳ ಪಟ್ಟಿ ಹಾಗೂ ಮೂಲ ಚಲನ್‌ಅನ್ನು ಖುದ್ದಾಗಿ ಕೇಂದ್ರ ಕಛೇರಿಗೆ ಸಲ್ಲಿಸಬೇಕಾದ **ದಿನಾಂಕ:10-06-2016**

**V ಪ್ರಾಚಾರ್ಯರಿಗೆ ವಿಶೇಷ ಸೂಚನೆ:**

1. 2016ರ ಮಾರ್ಚ್‌ನಲ್ಲಿ ನಡೆಸಿದ ದ್ವಿತೀಯ ಪಿಯುಸಿ ಪರೀಕ್ಷೆಗೆ ವಿದ್ಯಾರ್ಥಿಗಳು ಹಾಜರಾಗಿದ್ದು, ಪ್ರಕಟಿತ ಫಲಿತಾಂಶದಲ್ಲಿ ನ್ಯೂನತೆ ಇದ್ದಲ್ಲಿ ದಿನಾಂಕ **30-05-2016** ರ ಒಳಗಾಗಿ ಕೊಠಡಿ ಮೇಲ್ವಿಚಾರಕರ ದಿನಚರಿ ಮತ್ತು ಇತರೆ ಪೂರಕ ದಾಖಲೆಗಳನ್ನು ಕೇಂದ್ರ ಕಚೇರಿಗೆ ಖುದ್ದಾಗಿ ಒದಗಿಸಿ ಫಲಿತಾಂಶವನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಿದೆ. ತದನಂತರ ಬಂದಂತಹ ಯಾವುದೇ ರೀತಿಯ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ, ಮುಂದೆ ಸಂಭವಿಸಬಹುದಾದ ಆಗುಹೋಗುಗಳಿಗೆ ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

2. 2016ರ ಮಾರ್ಚ್‌ನಲ್ಲಿ ನಡೆಸಿದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಂದ 2016ರ ಜುಲೈನಲ್ಲಿ ನಡೆಸುವ ಸಪ್ಲಿಮೆಂಟರಿ ಪರೀಕ್ಷೆಗೆ ಶುಲ್ಕ ಕಟ್ಟಿಸಿಕೊಳ್ಳಲು **ಅನುತ್ತೀರ್ಣ ಓ.ಎಂ.ಆರ್ ಅರ್ಜಿಗಳಿಗಾಗಿ ಕಾಯಬೇಕಾದ ಅವಶ್ಯಕತೆ ಇಲ್ಲ**. ಫಲಿತಾಂಶಪಟ್ಟಿ ಆಧಾರದ ಮೇರೆಗೆ ಅನುತ್ತೀರ್ಣ ವಿಷಯಗಳಿಗೆ ನಿಯಮಾನುಸಾರ ಪರೀಕ್ಷಾ ಶುಲ್ಕ ಕಟ್ಟಿಸಿಕೊಳ್ಳುವುದು. ಅನುತ್ತೀರ್ಣ ಒ.ಎಂ.ಆರ್ ಅರ್ಜಿಗಳು ಕಾಲೇಜಿಗೆ ತಲುಪಿದ ಕೂಡಲೇ ಶುಲ್ಕಕಟ್ಟಿದ ಅಭ್ಯರ್ಥಿಗಳ ಒ.ಎಂ.ಆರ್ ಅರ್ಜಿಗಳನ್ನು ಭರ್ತಿಮಾಡಿ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

3. 2015ರ ಜುಲೈ ದ್ವಿತೀಯ ಪಿಯುಸಿ ಪರೀಕ್ಷೆ ಹಾಗೂ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಮೂಲ ಓಎಂಆರ್/ಅನುತ್ತೀರ್ಣ ಅರ್ಜಿ ಅಥವಾ ಹಿಂದಿನ ಎಂ.ಸಿ.ಎ. (MARKS CARD CUM APPLICATION) ಗಳ ಆಧಾರದ ಮೇಲೆ ಪರೀಕ್ಷಾ ಶುಲ್ಕಗಳನ್ನು ಕಟ್ಟಿಸಿಕೊಳ್ಳುವುದು.

5. 2016ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ನಿಯಮಾನುಸಾರ ಫಲಿತಾಂಶ ತಿರಸ್ಕರಿಸಿ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ, ಮೂಲ ಅನುತ್ತೀರ್ಣ ಓಎಂಆರ್ ಗಳನ್ನು ಪಡೆದುಕೊಂಡ ನಂತರವೇ ಕ್ರಮವಹಿಸುವುದು. ಶುಲ್ಕಗಳ ಬಗ್ಗೆ ಫಲಿತಾಂಶ ತಿರಸ್ಕರಣೆ ಅರ್ಜಿಯ ಹಿಂಬದಿಯಲ್ಲಿನ ಸೂಚನೆಗಳನ್ನು ಗಮನಿಸುವುದು.

6. 2015ರ ಮಾರ್ಚ್/ಜುಲೈ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಫಲಿತಾಂಶ ತಿರಸ್ಕರಿಸಿ 2016ರ ಜುಲೈ ಪರೀಕ್ಷೆ ಬರೆಯಲು ಇಚ್ಛಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ **ಮೂಲ ಅಂಕಪಟ್ಟಿಗಳ** (Original Marks card) ಆಧಾರದಮೇಲೆ ನಿಯಮಾನುಸಾರ ಫಲಿತಾಂಶ ತಿರಸ್ಕರಣೆಗೆ ಅವಕಾಶ ನೀಡುವುದು.

**ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:** ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ.
ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಪರೀಕ್ಷೆ/ಪೂ.ವೇ.ಪ.-2016/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ:25-05-2016.

ಗೆ,
ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ
ಪ್ರಾಚಾರ್ಯರುಗಳಿಗೆ.

ಮಾನ್ಯರೆ,

**ವಿಷಯ:** 2016ರ ದ್ವಿತೀಯ ಪಿಯುಸಿ ಪೂರಕ **(Supplementary)** ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸುತ್ತಿರುವ ಬಗ್ಗೆ.

* * * * *

2016ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ವೇಳಾ ಪಟ್ಟಿಯನ್ನು ಪ್ರಕಟಿಸಿದ್ದು, ಸದರಿ ವೇಳಾಪಟ್ಟಿಯ ಪ್ರತಿಯನ್ನು ಈ ಪತ್ರದ ಜೊತೆಯಲ್ಲಿ ಲಗತ್ತಿಸಿದ್ದು. ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಸೂಚಿಸಿದೆ.

ತಮ್ಮ ನಂಬುಗೆಯ,

**ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿ ಕಟ್ಟಡ , ಬೆಂಗಳೂರು-1.
2. ಆಪ್ತ ಕಾರ್ಯದರ್ಶಿಗಳು, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು, ವಿಧಾನ ಸೌಧ, ಬೆಂಗಳೂರು-1.
3. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರಿಗೆ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1. ಮಾಹಿತಿಗಾಗಿ.
5. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳಿಗೆ – ಮಾಹಿತಿಗಾಗಿ.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-1 – ಮಾಹಿತಿಗಾಗಿ.
7. ನಿರ್ದೇಶಕರು, ವೃತ್ತಿ ಶಿಕ್ಷಣ ಇಲಾಖೆ, ಬೆಂಗಳೂರು-1 – ಮಾಹಿತಿಗಾಗಿ.
8. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3. ಮಾಹಿತಿಗಾಗಿ.
9. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ.
10. ಇಲಾಖಾ ಇ-ಆಡಳಿತ ವಿಭಾಗಕ್ಕೆ, (ಅಂತರ್‌ಜಾಲದಲ್ಲಿ ಪ್ರಕಟಿಸಲು)

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560012

ಸಂಖ್ಯೆ: ಪಪೂಶಿ/ಪರೀಕ್ಷೆ/ಪೂವೇಪ/2016-17 ದಿನಾಂಕ: 25-05-2016

## 2016ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ವೇಳಾಪಟ್ಟಿ

| ಪರೀಕ್ಷಾ ದಿನ ಹಾಗೂ ದಿನಾಂಕ | ಬೆಳಗಿನ ವೇಳೆ 9-00 ರಿಂದ 12-15 ರವರೆಗೆ | ವಿಷಯ ಸಂಕೇತ | ಮಧ್ಯಾಹ್ನದ ವೇಳೆ 2-00 ರಿಂದ 5-15 ರವರೆಗೆ | ವಿಷಯ ಸಂಕೇತ |
|---|---|---|---|---|
| 01-07-2016 ಶುಕ್ರವಾರ | ಸಮಾಜಶಾಸ್ತ್ರ<br>ಲೆಕ್ಕಶಾಸ್ತ್ರ<br>ಭೌತಶಾಸ್ತ್ರ | 28<br>30<br>33 | | |
| 02-07-2016 ಶನಿವಾರ | ಅರ್ಥಶಾಸ್ತ್ರ<br>ಗಣಿತ | 22<br>35 | ತರ್ಕಶಾಸ್ತ್ರ<br>ಗೃಹವಿಜ್ಞಾನ | 23<br>67 |
| 03-07-2016 – ಭಾನುವಾರ, ರಜಾದಿನ | | | | |
| 04-07-2016 ಸೋಮವಾರ | ಇಂಗ್ಲೀಷ್ | 02 | | |
| 05-07-2016 ಮಂಗಳವಾರ | ಬಿಸಿನೆಸ್ ಸ್ಟಡೀಸ್<br>ರಸಾಯನಶಾಸ್ತ್ರ<br>ಶಿಕ್ಷಣ | 27<br>34<br>52 | | |
| 06-07-2016 – (ಕುತುಬ್-ಎ-ರಂಜಾನ್) – ರಜಾದಿನ | | | | |
| 07-07-2016 ಗುರುವಾರ | ಕನ್ನಡ<br>ತಮಿಳು<br>ತೆಲುಗು<br>ಮಲಯಾಳಂ<br>ಫ್ರೆಂಚ್ | 01<br>04<br>05<br>06<br>12 | ಮರಾಠಿ<br>ಅರೇಬಿಕ್ | 07<br>11 |
| 08-07-2016 ಶುಕ್ರವಾರ | ರಾಜ್ಯಶಾಸ್ತ್ರ<br>ಸಂಖ್ಯಾಶಾಸ್ತ್ರ<br>ಜೀವಶಾಸ್ತ್ರ | 29<br>31<br>36 | | |
| 09-07-2016 ಶನಿವಾರ | ಇತಿಹಾಸ<br>ಎಲೆಕ್ಟ್ರಾನಿಕ್ಸ್<br>ಕಂಪ್ಯೂಟರ್ ಸೈನ್ಸ್ | 21<br>40<br>41 | | |
| 10-07-2016 – ಭಾನುವಾರ, ರಜಾದಿನ | | | | |
| 11-07-2016 ಸೋಮವಾರ | ಭೂಗೋಳಶಾಸ್ತ್ರ<br>ಭೂಗರ್ಭಶಾಸ್ತ್ರ<br>ಬೇಸಿಕ್ ಮ್ಯಾಥ್ಸ್ | 24<br>37<br>75 | ಕರ್ನಾಟಿಕ್ ಸಂಗೀತ<br>ಹಿಂದೂಸ್ತಾನಿ ಸಂಗೀತ<br>ಮನಃಶಾಸ್ತ್ರ | 25<br>26<br>32 |
| 12-07-2016 ಮಂಗಳವಾರ | ಹಿಂದಿ<br>ಸಂಸ್ಕೃತ | 03<br>09 | ಉರ್ದು | 08 |
| 13-07-2016 ಬುಧವಾರ | ಐಚ್ಛಿಕ ಕನ್ನಡ | 16 | | |

ಡಾ. ರಾಮೇಗೌಡ, ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

120 TT Sup-15

GOVERNMENT OF KARNATAKA

DEPARTMENT OF PRE UNIVERSITY EDUCATION, SAMPIGE ROAD, 18TH CROSS, MALLESWARAM, BANGALORE-12

No: PUE/EXAM/STT/2016-17

DATED: 25-05-2016.

## TIME TABLE FOR II PUC SUPPLEMENTARY EXAMINATION – 2016

| DATE AND DAY OF EXAMINATION | MORNING SESSION 9 AM TO 12-15 NOON | SUB CODE | AFTER NOON SESSION 2 PM TO 5-15 PM | SUB CODE |
|---|---|---|---|---|
| 01-07-2016 FRIDAY | SOCIOLOGY<br>ACCOUNTANCY<br>PHYSICS | 28<br>30<br>33 | | |
| 02-07-2016 SATURDAY | ECONOMICS<br>MATHEMATICS | 22<br>35 | LOGIC<br>HOME SCIENCE | 23<br>67 |
| **03-07-2016, SUNDAY – HOLIDAY** | | | | |
| 04-07-2016 MONDAY | ENGLISH | 02 | | |
| 05-07-2016 TUESDAY | BUSINESS STUDIES<br>CHEMISTRY<br>EDUCATION | 27<br>34<br>52 | | |
| **06-07-2016, WEDNESDAY (KUTUB-A-RAMJAN) – HOLIDAY** | | | | |
| 07-07-2016 THURSDAY | KANNADA<br>TAMIL<br>TELUGU<br>MALAYALAM<br>FRENCH | 01<br>04<br>05<br>06<br>12 | MARATHI<br>ARABIC | 07<br>11 |
| 08-07-2016 FRIDAY | POLITICAL SCIENCE<br>STATISTICS<br>BIOLOGY | 29<br>31<br>36 | | |
| 09-07-2016 SATURDAY | HISTORY<br>ELECTRONICS<br>COMPUTER SCIENCE | 21<br>40<br>41 | | |
| **10-07-2016, SUNDAY – HOLIDAY** | | | | |
| 11-07-2016 MONDAY | GEOGRAPHY<br>GEOLOGY<br>BASIC MATHS | 24<br>37<br>75 | CARNATIC MUSIC<br>HINDUSTANI MUSIC<br>PSYCHOLOGY | 25<br>26<br>32 |
| 12-07-2016 TUESDAY | HINDI<br>SANSKRIT | 03<br>09 | URDU | 08 |
| 13-07-2016 WEDNESDAY | OPTIONAL KANNADA | 16 | | |

Dr. RAME GOWDA. I.A.S.,

DEPT. OF PRE-UNIVERSITY EDUCATION

120 TT Sup-15